ಇ) ಇದನ್ನು ತ್ವರಿತಗತಿಯಿಂದ ಸ್ಥಾಪಿಸಲು ಯಾವ ಕ್ರಮ ಕೈಕೊಳ್ಳಲಾಗಿದೆ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) (೧) ಈ ಸಕ್ಕರೆ ಕಾರ್ಖಾನೆಯು ಪೇರು ಹಣ ಸಂಗ್ರಹಣನ್ನು ಸದಸ್ಯರಂಗಳಿಂದ ಮಾತ್ರ ಮಾಡುತ್ತಿದೆ.

(೨) ರೂ. ೭೮.೩೨ ಲಕ್ಷವನ್ನು ೩೧-೧೦-೮೭ರ ವರೆಗೆ ಪೇರು ಬಂಡವಾಳವಾಗಿ ಸಂಗ್ರಹ ಮಾಡಿರುತ್ತದೆ.

ಆ) ರಾಜ್ಯ ಸರ್ಕಾರವು ತಾರೀಖು ೧೩-೧-೧೯೮೮ ರಂದು ಕೇಂದ್ರ ಸರ್ಕಾರಕ್ಕೆ, ಈ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಕೈಗಾರಿಕಾ ಪರವಾನಿಗೆ ನೀಡಲು ಶಿಫಾರಸ್ಸು ಮಾಡಿದೆ.

ಇ) ಭಾರತ ಸರ್ಕಾರವು ಕೈಗಾರಿಕಾ ಪರವಾನಿಗೆ ನೀಡಿದ ಮೇಲೆ ರಾಜ್ಯ ಸರ್ಕಾರವು ಈ ಕಾರ್ಖಾನೆಗೆ ಪೇರು ಬಂಡವಾಳ ಸಹಾಯ ಧನ ನೀಡುವ ವಿಷಯವನ್ನು ಪರಿಗಣಿಸಲಾಗುವುದು. ಇದರ ಜೊತೆಗೆ ಈ ಸಕ್ಕರೆ ಕಾರ್ಖಾನೆಯ ಮುಖ್ಯ ಪ್ರವರ್ತಕರಿಂದ ಸಾಲದ ಅವಶ್ಯಕತೆಯ ಬಗ್ಗೆ ಪ್ರಸ್ತಾವನೆ ಬಂದ ನಂತರ ಉನ್ನತ ಮಟ್ಟದ ಹಣಕಾಸು ಸಂಸ್ಥೆಗಳಿಂದ ನೆರವು ನೀಡುವ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.— ಬೀದರ್ ಜಿಲ್ಲೆ ಕರ್ನಾಟಕದಲ್ಲಿಯೇ ಅತೀ ಹೆಚ್ಚಿನ ಕಬ್ಬು ಬೆಳೆಯುವಂಥ ಪ್ರದೇಶವಾಗಿದೆ. ಇದಕ್ಕೆ ಪೂರ್ವದಲ್ಲಿ ಬೀದರ್‌ನಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿದೆ. ಈಗ ಎರಡನೆಯ ಸಕ್ಕರೆ ಕಾರ್ಖಾನೆ ಇದಾಗಿದ್ದು, ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಕೇಂದ್ರಸರ್ಕಾರದವರು ಕೆಲವೊಂದು ಕ್ಲಾರಿಫಿಕೇಷನ್ ನಮ್ಮ ಸರ್ಕಾರಕ್ಕೆ ಕೇಳಿರುವ ಬಗ್ಗೆ ತೀವ್ರವಾಗಿ ನಮ್ಮ ಸರ್ಕಾರದಿಂದ ಉತ್ತರ ಕಳುಹಿಸಿಲ್ಲ ಎಂದು ಲೋಕಸಭಾ ಸದಸ್ಯರು ತಿಳಿಸಿರುತ್ತಾರೆ. ಈ ಒಂದು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಅನುಕೂಲವಾಗುತ್ತದೆ ನಮ್ಮ ರೈತರು ಬೆಳೆದಂಥ ಕಬ್ಬು ಮಹಾರಾಷ್ಟ್ರಕ್ಕೆ ಹೋಗುತ್ತದೆ, ಆದ್ದರಿಂದ ಮಾನ್ಯ ಮಂತ್ರಿಗಳಂ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಪರವಾನಿಗೆಯನ್ನು ಕೊಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳವುದಕ್ಕೆ ಪ್ರಯತ್ನ ಮಾಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಸ್ಪಷ್ಟವಾದ ನಿಲುವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ ಹೆಚ್. ಪಟೇಲ್.— ಇದರ ಬಗ್ಗೆ ನಾವು ಆಗಲೇ ಹೇಳಿದ್ದೇವೆ. ಈಗಾಗಲೇ ನಮ್ಮ ಸರ್ಕಾರದ ಅಧಿಕಾರದ ವ್ಯಾಪ್ತಿಯಲ್ಲಿರತಕ್ಕಂಥ ಎಲ್ಲಾ ಶಿಫಾರಸ್ಸುಗಳನ್ನು ನಾವು ಮಾಡಿದ್ದೇವೆ. ಮೇಲಾಗಿ ಇದು ಒಂದೇ ಅಲ್ಲ. ಇನ್ನೂ ಎರಡು ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳಿದ್ದೇವೆ. ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಯುತ್ತಿರುವುದರಿಂದ ಅಲ್ಲದೆ, ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಕಬ್ಬು ಹೋಗುತ್ತಿರುವುದರಿಂದ ಆದಷ್ಟು ಬೇಗ ಇಂಡಸ್ಟ್ರಿಯಲ್ ಲೈಸೆನ್ಸ್ ಕೊಡಬೇಕೆಂದು ಒತ್ತಾಯ ಮಾಡಿದ್ದೇವೆ ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಬಸವರಾಜ್ ಪಾಟೀಲ ಅಟ್ಟೂರ್.—ಈಗ ಪೇರು ಹಣ ೯ ಕೋಟಿ ರೂಪಾಯಿ ಕೊಡುತ್ತಿಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯವನ್ನು ತಿಳಿಸಬೇಕು.

ಶ್ರೀ ಜೆ.ಹೆಚ್. ಪಟೇಲ್.— ಹಣಕಾಸು ಸಂಸ್ಥೆಯಿಂದ ನೆರವು ಪಡೆಯುವಂಥದ್ದು ಯಾವಾಗ ಹೇಳಬೇಕೊ. ಆಗ ಹೇಳಿ, ಈಗ ಇನ್ನೂ ಆ ಸ್ಟೇಜಿಗೆ ಬಂದಿಲ್ಲ.

## ಸಂಡೂರಿನಲ್ಲಿ ಪಶುವೈದ್ಯ ಆಸ್ಪತ್ರೆ

೭೮೩. ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಡೂರು ತಾಲ್ಲೂಕು ಕೇಂದ್ರದಲ್ಲಿನ ಪಶುವೈದ್ಯ ಶಾಲೆಗೆ ಸರಕಾರಿ ಕಟ್ಟಡ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸದರಿ ಪಶುವೈದ್ಯ ಶಾಲೆಗೆ ಸರ್ಕಾರಿ ಕಟ್ಟಡವನ್ನು ತ್ವರಿತವಾಗಿ ಒದಗಿಸಲಾಗುವುದೆ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

ಅ) ಬಂದಿದೆ.

ಆ) ಈ ಬಗ್ಗೆ ಬಳ್ಳಾರಿ ಜಿಲ್ಲಾ ಪರಿಷತ್ತಿನ ಮತಿಯಿಂದ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಪಂಪಾಪತಿ (ಶ್ರೀ ಯು. ಭೂಪತಿಯವರ ಪರವಾಗಿ).— ಸ್ವಾಮಿ, ಸಂಡೂರು ತಾಲೂಕು ಕೇಂದ್ರದಲ್ಲಿನ ಪಶುವೈದ್ಯಶಾಲೆಗೆ ಸರ್ಕಾರಿ ಕಟ್ಟಡ ಇಲ್ಲದಿರುವುದರಿಂದ ಬಹಳ ತೊಂದರೆಯಾಗಿದೆ. ಆದಷ್ಟು ಜಾಗ್ರತೆ ಜಿಲ್ಲಾಪರಿಷತ್ತಿನವರಿಗೆ ಹೇಳಿ ಈ ಕೆಲಸವನ್ನು ಇನ್ನು ಸಾಧ್ಯ ತೀಂಗಳಲ್ಲಿ ಪೂರೈಸಿ ಕೊಡುತ್ತೀರಿ? ಇದರ ಬಗ್ಗೆ ತಾವು ಒಂದು ಭರವಸೆಯನ್ನು ಕೊಡಬೇಕು.

ಶ್ರೀ ಸಿದ್ದರಾಮಯ್ಯ —ಪಶುವೈದ್ಯಶಾಲೆಗಳ ಕಟ್ಟಡಗಳನ್ನು ಕಟ್ಟಿಸುವ ಕೆಲಸವನ್ನು ಜಿಲ್ಲಾ ಪರಿಷತ್ತಿನವರು ಮಾಡುತ್ತಾರೆ. ಈಗಾಗಲೇ ಜಿಲ್ಲಾ ಪರಿಷತ್ತಿನವರು ಜಮೀನನ್ನು ಈ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ. ಆದಷ್ಟು ಬೇಗ ಕಟ್ಟಡವನ್ನು ಕಟ್ಟಿಸುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೇವೆ.

## ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ನಿಗಮ

೧೧೦೯. ಶ್ರೀ ಗೋಪಾಲ ಮುಕುಂದ ಕಾಣಜೆ (ಸಿರ್ಸಿ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ನಿಗಮಕ್ಕೆ ಸರ್ಕಾರದಿಂದ ಒದಗಿಸಿದ ಮೂಲ ಬಂಡವಾಳ ಎಷ್ಟು ?

ಆ) ೧೯೮೬–೮೭ ಹಾಗೂ ೧೯೮೭–೮೮ರಲ್ಲಿ ಸದರಿ ನಿಗಮವು ಗಳಿಸಿದ ಲಾಭವೆಷ್ಟು.

ಇ) ಲಾಭಗಳಿಸಿದ್ದಲ್ಲಿ, ಅದಕ್ಕೆ ಕಾರಣವೇನು, ಹಾಗೂ ಅದಕ್ಕೆ ಹೊಣೆ ಯಾರು ?

ಶ್ರೀ ಬಿ.ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಸರ್ಕಾರದಿಂದ ಒದಗಿಸಿದ ಮೂಲ ಬಂಡವಾಳ ೩೦–೬–೮೭ರಲ್ಲಿ ಇದ್ದಂತೆ ರೂ. ೮೦೦ ಲಕ್ಷಗಳು.

ಆ) ೧೯೮೬–೮೭ನೇ ಸಾಲಿನ ಲೆಕ್ಕಗಳು ಪೂರ್ಣಗೊಂಡಿದ್ದು ಮಾಹಾಲೇಖಪಾಲರಿಂದ ಪರಿಶೋಧನೆ ನಡೆಯುತ್ತಿದೆ, ನಿಗಮವು ೧೯೮೬–೮೭ನೇ ಸಾಲಿನಲ್ಲಿ ಲಾಭಗಳಿಸುವ ಸಾಧ್ಯತೆ ಇಲ್ಲ.

ನಿಗಮದ ಲೆಕ್ಕಪತ್ರಗಳ ವರ್ಷವು ಜುಲೈಯಿಂದ ಜೂನ್‌ವರೆಗೆ ಆದ್ದರಿಂದ ೧೯೮೭–೮೮ರ ಲೆಕ್ಕ ಪತ್ರಗಳ ವರ್ಷ ಮುಗಿದಿಲ್ಲ.

ಇ) ೧೯೮೬–೮೭ನೇ ಸಾಲಿಗೆ ನಿಗಮವು ಲಾಭ ಗಳಿಸುವ ಸಾಧ್ಯತೆ ಇಲ್ಲದಿರುವುದಕ್ಕೆ ಮುಖ್ಯ ಕಾರಣ ಗಳು.—

೧) ಒಳ್ಳೆಯ ಬೇಡಿಕೆ ಇದ್ದ ಕಚ್ಚಾ ಪಾಲುಗಳು ಸಾಕಷ್ಟು ನಿಗಮಕ್ಕೆ ಸರಬರಾಜು ಆಗಲಿಲ್ಲ. ಆದ್ದರಿಂದ ನಿಗಮವು ಕಚ್ಚಾ ಪಾಲುಗಳ ಪಹಿವಾಟುಗಳನ್ನು ಹೆಚ್ಚಿಗೆ ನಡೆಸಲು ಸಾಧ್ಯವಾಗಲಿಲ್ಲ.

೨) ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಇನ್ನಿತರ ಸ್ಥಳಗಳಲ್ಲಿ ನಿಗಮವು ನಿರ್ಮಿಸಿರುವ ಕೈಗಾರಿಕಾ ಮಳಿಗೆಗಳಿಗೆ ಬೇಡಿಕೆ ಇಲ್ಲದಿರುವುದರಿಂದ ಸಾಕಷ್ಟು ಮಳಿಗೆಗಳು ಖಾಲಿ ಇವೆ. ಈ ಕಾರಣ ದಿಂದ ನಿಗಮಕ್ಕೆ ಬರಬೇಕಾದ ಕಂತುಗಳು (ಬಡ್ಡಿಯನ್ನೊಳಗೊಂಡು) ಸಕಾಲದಲ್ಲಿ ಸಂದಾಯವಾಗುತ್ತಿಲ್ಲ. ಆದರೆ ನಿಗಮವು ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ ಬಡ್ಡಿಯನ್ನು ಕೊಡಬೇಕಾಗಿದೆ.